# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1175 |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ. ಪಿ.ಹೆಚ್.ಪೂಜಾರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19.12.2024 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>1964 ರಿಂದ ಆಲಮಟ್ಟಿ ಅಣೆಕಟ್ಟೆಗೆ (ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ) ಇಲ್ಲಿಯವರೆಗೆ ಸರ್ಕಾರಗಳು ಎಷ್ಟೆಷ್ಟು ಹಣ ಖರ್ಚು ಮಾಡಿವೆ: (ವಿವರಗಳನ್ನು ಪ್ರತ್ಯೇಕವಾಗಿ ಒದಗಿಸುವುದು)</td>
<td rowspan="2">ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ನಾರಾಯಣಪುರ ಮತ್ತು ಆಲಮಟ್ಟಿ ಅಣೆಕಟ್ಟುಗಳ ನಿರ್ಮಾಣಕ್ಕಾಗಿ ತಗುಲಿದ ವೆಚ್ಚದ ವಿವರಗಳು ಈ ಕೆಳಗಿನಂತಿವೆ:<br>
(ರೂ. ಕೋಟಿಗಳಲ್ಲಿ)
<table>
<tr><th>ಆಣೆಕಟ್ಟು ನಿರ್ಮಾಣ</th><th>ವೆಚ್ಚ</th></tr>
<tr><td>ನಾರಾಯಣಪುರ</td><td>186.00</td></tr>
<tr><td>ಆಲಮಟ್ಟಿ</td><td>382.07</td></tr>
<tr><td>ಒಟ್ಟು ವೆಚ್ಚ</td><td>568.07</td></tr>
</table>
ಕೃಷ್ಣಾ ಮೇಲ್ದಂಡೆ ಯೋಜನೆಯ ಅನುಷ್ಠಾನಕ್ಕಾಗಿ ಇದುವರೆವಿಗೂ ಖರ್ಚು ಮಾಡಲಾದ ವೆಚ್ಚದ (ಕಾಲುವೆಗಳ ನಿರ್ಮಾಣ, ಭೂಸ್ವಾಧೀನ, ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ವೆಚ್ಚ ಒಳಗೊಂಡಂತೆ) ವಿವರಗಳು ಈ ಕೆಳಗಿನಂತಿವೆ:<br><br>
1. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ 1&2 : ರೂ. 13,170.00 ಕೋಟಿ<br>
2.ಕೃಷ್ಣಾ ಮೇಲ್ದಂಡೆ ಯೋಜನೆ ಹಂತ 3 : ರೂ. 18,307.00 ಕೋಟಿ<br><br>
ನಾರಾಯಣಪುರ ಮತ್ತು ಆಲಮಟ್ಟಿ ಆಣೆಕಟ್ಟು ಹಿನ್ನೀರಿನಲ್ಲಿ ಮುಳುಗಡೆಯಾದ & ಮುಳುಗಡೆ ಹೊಂದಲಿರುವ ಕ್ಷೇತ್ರದ ವಿವರಗಳು ಈ ಕೆಳಗಿನಂತಿವೆ:<br>
(ಕ್ಷೇತ್ರ ಎಕರೆಗಳಲ್ಲಿ)
<table>
<tr><th rowspan="2">ಕೃ.ಮೇ.ಯೋ ಹಂತ</th><th colspan="2">ಆಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆ ಹೊಂದಿದ ಜಮಿನು ಕ್ಷೇತ್ರ</th><th rowspan="2">ಒಟ್ಟು</th></tr>
<tr><th>ನಾರಾಯಣಪುರ</th><th>ಆಲಮಟ್ಟಿ</th></tr>
<tr><td>ಹಂತ-1&2</td><td>37,010</td><td>1,38,460</td><td>1,75,470</td></tr>
<tr><td>ಹಂತ-3</td><td>-</td><td>75,563 (ಮುಳುಗಡೆ ಹೊಂದಲಿರುವ)</td><td>75,563</td></tr>
<tr><td>ಒಟ್ಟು</td><td>37,010</td><td>2,14,023</td><td>2,51,033</td></tr>
</table>
ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1, 2 & 3 ಯೋಜನೆಗಾಗಿ ಜಮೀನು ಭೂಸ್ವಾಧೀನಕ್ಕಾಗಿ ಮತ್ತು ಮುಳುಗಡೆಯಲ್ಲಿನ ಸಂತ್ರಸ್ಥರುಗಳಿಗೆ ಪುನರ್ವಸತಿಗಾಗಿ 1995ನೇ ಸಾಲಿನಿಂದ ಇಲ್ಲಿಯವರೆಗೆ ಮಾಡಲಾದ</td></tr>
<tr><td>ಆ)</td><td>ನಾರಾಯಣಪುರ ಡ್ಯಾಂ ಮತ್ತು ಆಲಮಟ್ಟಿ ಡ್ಯಾಂಗಳ ನಿರ್ಮಾಣಕ್ಕಾಗಿ ತಗುಲಿದ ವೆಚ್ಚ ಎಷ್ಟು: ನಾರಾಯಣಪುರ ಮತ್ತು ಆಲಮಟ್ಟಿ ಅಡಿಯ ಕಾಲುವೆಗಳ ನಿರ್ಮಾಣಕ್ಕಾಗಿ ತಗುಲಿದೆ ವೆಚ್ಚ ಎಷ್ಟು: ಈ ಎರಡೂ ಡ್ಯಾಂಗಳ ಮುಳುಗಡೆಯಲ್ಲಿ ಬಂದ ಜಮೀನುಗಳ ಕ್ಷೇತ್ರವೆಷ್ಟು: (ಎರಡನ್ನೂ ಪ್ರತ್ಯೇಕವಾಗಿ ನೀಡುವುದು) ಭೂಸ್ವಾಧೀನಕ್ಕಾಗಿ ಮತ್ತು ಮುಳುಗಡೆಯಲ್ಲಿ ಬಂದ ಜನರ ಪುನರ್ವಸತಿಗಾಗಿ ಮಾಡಲಾದ ಖರ್ಚು ಎಷ್ಟು: (ಪ್ರತ್ಯೇಕವಾಗಿ ಮಾಹಿತಿಯನ್ನು ವಿವರಿಸುವುದು)</td></tr>
</table>

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td></td><td></td><td>ವೆಚ್ಚದ ವಿವರಗಳು ಈ ಕೆಳಗಿನಂತಿವೆ:<br>(ರೂ. ಕೋಟಿಗಳಲ್ಲಿ)<br><table>
<tr><th rowspan="2">ಕೃ.ಮೇ.ಯೋ ಹಂತ</th><th colspan="2">ವೆಚ್ಚ</th><th rowspan="2">ಒಟ್ಟು ವೆಚ್ಚ</th></tr>
<tr><th>ಭೂಸ್ವಾಧೀನ</th><th>ಪುನರ್ವಸತಿ & ಬಿಟಿಡಿಎ</th></tr>
<tr><td>ಹಂತ– 1 & 2</td><td>4267.17</td><td>2460.92</td><td>6728.09</td></tr>
<tr><td>ಹಂತ–3</td><td>3734.53</td><td>3670.91</td><td>7405.44</td></tr>
</table></td></tr>
<tr><td>ಇ)</td><td>ಯು.ಕೆ.ಪಿ ಪೂರ್ಣಗೊಳ್ಳಲು ಇನ್ನೂ ಬೇಕಾಗುವ ಹಣ ಎಷ್ಟು; ಜಮೀನು ಮತ್ತು ಕಟ್ಟಡಗಳಿಗಾಗಿ ಜಮೀನುಗಳ ಮುಳುಗಡೆಯಾಗುವ ಕ್ಷೇತ್ರವೆಷ್ಟು; ಅವುಗಳಿಗೆ ಪರಿಹಾರ ಧನಕ್ಕಾಗಿ ಬೇಕಾಗುವ ಹಣ ಎಷ್ಟು; ಅಲ್ಲದೇ ಈ ಯೋಜನೆಯ ಕಟ್ಟಡಗಳಿಗೆ ಪರಿಹಾರ ನೀಡಲು ಬೇಕಾಗುವ ಹಣವೆಷ್ಟು; ಒಟ್ಟಾರೆ ಈ ಯೋಜನೆಯನ್ನು ಪೂರ್ಣಗೊಳಿಸಲು ಬೇಕಾಗುವ ಅವಧಿ ಎಷ್ಟು; ಈ ಯೋಜನೆಗಳನ್ನು ಪೂರ್ಣಗೊಳಿಸುವುದು ಯಾವಾಗ? (ಸವಿವರವಾಗಿ ಮಾಹಿತಿ ನೀಡುವದು)</td><td>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1&2ರ ಯೋಜನೆಯನ್ನು ಪೂರ್ಣಗೊಳಿಸಲಾಗಿರುತ್ತದೆ.<br><br>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರ ಯೋಜನೆಯನ್ನು ಪರಿಷ್ಕೃತ ಅನುಮೋದಿತ ಅಂದಾಜು ಮೊತ್ತ ರೂ.51,148.94 ಕೋಟಿ (2014–15ನೇ ಸಾಲಿನ ದರಪಟ್ಟಿಯಂತೆ)ಗೆ ದಿನಾಂಕ:09.10.2017ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಇಲ್ಲಿಯವರೆಗೆ ರೂ.18,307.33 ಕೋಟಿ ವೆಚ್ಚ ಮಾಡಲಾಗಿರುತ್ತದೆ. ಅನುಮೋದಿತ ಯೋಜನಾ ಮೊತ್ತದನ್ವಯ ಬಾಕಿ ಉಳಿದ ಮೊತ್ತ ರೂ.32,841.61 ಕೋಟಿ ಆಗಿರುತ್ತದೆ.<br><br>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1&2ರಲ್ಲಿ ಮುಳುಗಡೆಯಾದ ಜಮೀನು 1,75,470 ಎಕರೆ ಕ್ಷೇತ್ರಕ್ಕೆ & ಮುಳುಗಡೆಯಾದ 78,854 ಕಟ್ಟಡಗಳಿಗೆ ಈಗಾಗಲೇ ಪರಿಹಾರ ನೀಡಲಾಗಿದೆ.<br><br>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರಲ್ಲಿ ಮುಳುಗಡೆಯಾಗುವ ಜಮೀನು 75,563 ಎಕರೆ & ಮುಳುಗಡೆಯಾಗಲಿರುವ 25,660 ಕಟ್ಟಡಗಳ ಪರಿಹಾರಕ್ಕಾಗಿ ಮೊತ್ತ ರೂ.17,627.00 ಕೋಟಿಗಳ ಅನುಮೋದಿತ ಮೊತ್ತದಲ್ಲಿ, ಇಲ್ಲಿಯವರೆಗೆ ರೂ.3,734.53 ಕೋಟಿ ಮೊತ್ತ ಪರಿಹಾರ ನೀಡಲಾಗಿರುತ್ತದೆ. ಅನುಮೋದಿತ ಮೊತ್ತದನ್ವಯ ಬಾಕಿ ಉಳಿದ ಮೊತ್ತ ರೂ.13,892.47 ಕೋಟಿ ಆಗಿರುತ್ತದೆ.<br><br>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರಡಿ ರಾಜ್ಯಕ್ಕೆ ಹಂಚಿಕೆಯಾದ 130 ಟಿಎಂಸಿ ನೀರಿನ ಬಳಕೆಯು ಕೇಂದ್ರ ಸರ್ಕಾರದಿಂದ ಹೊರಡಿಸುವ ಕೃಷ್ಣಾ ನ್ಯಾಯಾಧೀಕರಣ–2ರ ಅಂತಿಮ ತೀರ್ಪಿನ ಅಧಿಸೂಚನೆಗೆ (Gazette Notification) ಒಳಪಟ್ಟಿರುತ್ತದೆ. ಕೃಷ್ಣಾ ನ್ಯಾಯಾಧಿಕರಣ–2ರ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಕಣಿವೆ ರಾಜ್ಯಗಳ ದಾಖಲಿಸಿರುವ ವ್ಯಾಜ್ಯಗಳು ಇತ್ಯರ್ಥಕ್ಕೆ ಬಾಕಿ ಇದ್ದು, ನ್ಯಾಯಾಧೀಕರಣ ತೀರ್ಪಿನ ಗೆಜೆಟ್ ಅಧಿಸೂಚನೆಗೆ ರಾಜ್ಯ ಸರ್ಕಾರದಿಂದ ನಿರಂತರವಾಗಿ ಆಡಳಿತಾತ್ಮಕ ಮತ್ತು ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳುತ್ತಿದೆ.<br><br>ಆದಾಗ್ಯೂ ಸರ್ಕಾರವು ಯೋಜನೆಗೆ ನೀಡಿರುವ ಆಡಳಿತಾತ್ಮಕ ಅನುಮೋದನೆ ಮೇರೆಗೆ ಅನುದಾನ ಲಭ್ಯತೆ ಅನುಸಾರ ಸೂಕ್ತ ಅನುದಾನ ಒದಗಿಸಿ ಯೋಜನೆಯನ್ನು ಹಂತ ಹಂತವಾಗಿ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು.</td></tr>
</table>

ಸಂಖ್ಯೆ: ಜಸಂಇ 111 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ